ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	223 (255)
ಮಾನ್ಯ ಸದಸ್ಯರ ಹೆಸರು	:	ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	14-09-2021
ಉತ್ತರಿಸುವ ಸಚಿವರು	:	ಪೌರಾಡಳಿತ, ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ಬೀದರ್ ತಾಲ್ಲೂಕಿನ ಹೊರ ವಲಯದಲ್ಲಿ ಕಸ ವಿಲೇವಾರಿ ಘಟಕವನ್ನು ಯಾವಾಗ ಸ್ಥಾಪಿಸಲಾಯಿತು: ಲ್ಯಾಂಡ್ ಫಿಲ್ ಸೈಟ್ ಇದಕ್ಕೆ ತಗುಲಿದ ವೆಚ್ಚವೆಷ್ಟು: (ಸಂಪೂರ್ಣ ಮಾಹಿತಿ ನೀಡುವುದು)	ಬೀದರ್ ನಗರಸಭೆಯ ಘನ ತ್ಯಾಜ್ಯ ವಸ್ತು ನಿರ್ವಹಣೆಗಾಗಿ ಬೀದರ್ ತಾಲ್ಲೂಕಿನ ಹೊರ ವಲಯದಲ್ಲಿ ಸುಲ್ತಾನಪೂರ ಜೆ. ಗ್ರಾಮದ ಸರ್ವೆ ನಂ. 39/ಎ & 39/ಸಿ ರಲ್ಲಿನ 24 ಎಕರೆ 18 ಗುಂಟೆ ಜಮೀನಿನಲ್ಲಿ ಕಸ ವಿಲೇವಾರಿ ಘಟಕವನ್ನು 2004-05ನೇ ಸಾಲಿನಿಂದ ಇಲ್ಲಿಯವರೆಗೆ ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗಿರುತ್ತದೆ. ಕಾಮಗಾರಿಗಳಿಗೆ ತಗುಲಿದ ವೆಚ್ಚದ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ಘಟಕಗಳು	ಖರ್ಚು ಮಾಡಲಾದ ಮೊತ್ತ ರೂ ಲಕ್ಷಗಳಲ್ಲಿ
1	1 ಟನ್ ಪ್ಲಾಸ್ಟಿಕ್ ಬೇಲಿಂಗ್ ಯಂತ್ರ	4.25
2	50 ಮೆ. ಟನ್ ವೇಯಿಂಗ್ ಬ್ರಿಡ್ಜ್	13.65
3	40 ಟಿಪಿಡಿ ಸ್ಕ್ರೀನಿಂಗ್ ಯಂತ್ರ ಜೊತೆಗೆ ಕನ್ವೇಯರ್ ಬೆಲ್ಟ್	40.00
4	ಸೇಗ್ರಿಗೇಷನ್ ಯಂತ್ರ	10.00
5	ವಿಂಡ್‌ರೋ ಪ್ಲಾಟ್ ಫಾರಂ	40.00
6	ಸಿಸಿ ಚರಂಡಿ ಲಿಚೇಟ್ ಟ್ಯಾಂಕ್‌ನೊಂದಿಗೆ ನಿರ್ಮಾಣ	36.00
7	ವರ್ಮಿ ಕಾಂಪೋಸ್ಟಿಂಗ್	18.00
8	ಸ್ಯಾನಿಟರಿ ಪಿಟ್‌ನೊಂದಿಗೆ ಲೈನರ್, ಲೀಚೆಟ್ ಟ್ಯಾಂಕ್ ನೊಂದಿಗೆ ನಿರ್ಮಾಣ	42.35
9	ನೆಲಭರ್ತಿ ನಿವೇಶನ ಖರೀದಿ	15.25
10	ಸಂಸ್ಕರಣಾ ಜಾಗದ ಸುತ್ತ ಕಾಂಪೌಂಡ್ ನಿರ್ಮಿಸಲು	53.75
	ಒಟ್ಟು ಮೊತ್ತ	**273.25**

ಕ್ರ. ಸಂ	ಪ್ರಶ್ನೆ	ಉತ್ತರ
(ಆ)	ಈ ಘಟಕದ ಯಂತ್ರೋಪಕರಣಗಳು ಎಲ್ಲಿ ಯಾವಾಗ, ಯಾವ ಕಂಪನಿಯಿಂದ ಖರೀದಿಸಲಾಗಿದೆ ಹಾಗೂ ಈ ಯಂತ್ರವನ್ನು ಟೆಂಡರ್ ಮೂಲಕ ಖರೀದಿಸಲಾಗಿದೆಯೇ: (ಟೆಂಡರ್ ಕರೆದಿದ್ದಲ್ಲಿ, ಟೆಂಡರ್ ಪ್ರಕ್ರಿಯೆಯ ಪ್ರತಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)	ಸದರಿ ಘಟಕದಲ್ಲಿ ಟೆಂಡರ್ ಪ್ರಕ್ರಿಯೆ ಹಾಗೂ ನಿರ್ಮಿತಿ ಕೇಂದ್ರದ ಮೂಲಕ ಸ್ಥಾಪಿಸಿರುವ ಯಂತ್ರಗಳ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.

(ಇ)	ಈ ಘಟಕದಿಂದ ಬರುವ ದುರ್ವಾಸನೆಯು, ಸುತ್ತಮುತ್ತಲಿನಲ್ಲಿ ಬರುವ ಗ್ರಾಮದ ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಸಮಸ್ಯೆಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸ್ಪಷ್ಟ ವಿವರ ನೀಡುವುದು)	ಈ ಘಟಕದಿಂದ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಹಾಗೂ ಸಾರ್ವಜನಿಕರಿಗೆ ಆಗಬಹುದಾದಂತಹ ತೊಂದರೆಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1) ಕಸ ವಿಲೇವಾರಿ ಘಟಕದಲ್ಲಿ 8 ಅಡಿ ಎತ್ತರದ ಸುತ್ತುಗೋಡೆ ಮತ್ತು 3 ಅಡಿ ಫೆನ್ಸ್ ನಿರ್ಮಾಣ ಮಾಡಲಾಗಿದೆ. 2) ಘಟಕದ ಸುತ್ತಲೂ ಸುಮಾರು 500 ಗಿಡಗಳನ್ನು ನೆಡಲಾಗಿದೆ. 3) ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಸಂಗ್ರಹವಾಗಿರುವ ಹಳೆಯ ತ್ಯಾಜ್ಯ (legacy waste) ಸಂಸ್ಕರಣೆಗೆ EOI ನ್ನು ಆಹ್ವಾನಿಸಿ ನಿರ್ವಹಣೆ ಮಾಡಲು ಕ್ರಮವಹಿಸಿದೆ. 4) ಹಾಲಿ ಲಭ್ಯವಿರುವ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಶೇ. 35 ರಷ್ಟು ಹಸಿ ತ್ಯಾಜ್ಯವನ್ನು ಕಾಂಪೋಸ್ಟಿಂಗ್ ವಿಧಾನದ ಮೂಲಕ ಸಂಸ್ಕರಣೆ ಮಾಡಲು ಕ್ರಮ ವಹಿಸಿದೆ. ಉಳಿಕೆ ತ್ಯಾಜ್ಯದ ವಾಸನೆ, ಗಾತ್ರ ತಗ್ಗಿಸಲು ಬಯೋಕಲ್ಚರ್ ದ್ರಾವಣವನ್ನು ಸಿಂಪಡಿಸಲಾಗುತ್ತಿದೆ. ಬಾಗಶಃ ಸಂಸ್ಕರಣೆ ಮಾಡಲಾದ ತ್ಯಾಜ್ಯವನ್ನು ವರ್ಮಿ ಕಾಂಪೋಸ್ಟಿಂಗ್ ಸಹ ಮಾಡಲಾಗುತ್ತಿದೆ. 5) ನಿಸ್ಸತ್ವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸ್ಯಾನಿಟರಿ ಲ್ಯಾಂಡ್‌ಫಿಲ್ ಸೌಲಭ್ಯವನ್ನು ಅಭಿವೃದ್ಧಿ ಪಡಿಸಲಾಗಿದೆ. 6) ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ ಬೀದರ್ ನಗರಸಭೆ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ 91 ಟಿ.ಪಿ.ಡಿ ಘನತ್ಯಾಜ್ಯವನ್ನು ಪೂರ್ಣ ಪ್ರಮಾಣದಲ್ಲಿ ಸಂಸ್ಕರಣೆ ಮಾಡಲು ಅಗತ್ಯವಿರುವ ಹೆಚ್ಚುವರಿ ಮೂಲಭೂತ ಸೌಲಭ್ಯಗಳನ್ನು ಪ್ರಸ್ತಾಪಿಸಿ ರೂ. 976.76 ಲಕ್ಷಗಳ ಬಂಡವಾಳ ಮೊತ್ತದ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ, ಸರ್ಕಾರದ ಅನುಮೋದನೆ ಪಡೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. 7) ಪ್ಲಾಸ್ಟಿಕ್ ತ್ಯಾಜ್ಯವನ್ನು ಬೇಲಿಂಗ್ ಮಾಡುತ್ತಿರುವುದಾಗಿ ಬೀದರ್ ನಗರಸಭೆಯವರು ವರದಿ ಮಾಡಿರುತ್ತಾರೆ.
(ಈ)	ಈ ಘಟಕದಿಂದ ಇಲ್ಲಿಯವರೆಗೆ ಎಷ್ಟು ಪ್ರಮಾಣದಲ್ಲಿ 'ಗೊಬ್ಬರ' ತಯಾರಿಸಲಾಗಿದೆ; ಹಾಗೂ ಮಾರಾಟದಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು? (ವರ್ಷವಾರು ಮಾಹಿತಿ ನೀಡುವುದು)	ಘನ ತ್ಯಾಜ್ಯ ವಸ್ತು ನಿರ್ವಹಣಾ ಘಟಕವು 2018 ರಿಂದ ಕಾರ್ಯಾರಂಭ ಮಾಡಿದ್ದಾಗ್ಯೂ, 2019-20ರಿಂದ ಗೊಬ್ಬರ ಉತ್ಪಾದನೆಯನ್ನು ಪ್ರಾರಂಭಿಸಲಾಗಿದ್ದು, ಉತ್ಪಾದಿಸಲಾದ 15 ಟನ್ ಗೊಬ್ಬರವನ್ನು ನಗರಸಭೆ ಉದ್ಯಾನವನಗಳಲ್ಲಿ ಉಪಯೋಗಿಸಲಾಗಿರುತ್ತದೆ. ಮುಂದುವರೆದು 2020-21ನೇ ಸಾಲಿನಲ್ಲಿ ಅಂದಾಜು 140 ಟನ್ ಗೊಬ್ಬರವನ್ನು ಉತ್ಪಾದಿಸಿ, ಶ್ರೀ ಸಾಯಿ ಬಯೋ ಆರ್ಗ್ಯಾನಿಕ್ ಹೈದರಾಬಾದ್‌ರವರಿಗೆ ರೂ. 85,000/-ಕ್ಕೆ ಮಾರಾಟ ಮಾಡಲಾಗಿರುತ್ತದೆ ಎಂದು ಬೀದರ್ ನಗರಸಭೆಯವರು ವರದಿ ಮಾಡಿರುತ್ತಾರೆ.

ಸಂಖ್ಯೆ: ನಅಇ 150 ಸಿಎಸ್‌ಎಸ್ 2021

[ಎನ್. ನಾಗರಾಜ್ (ಎಂ.ಟಿ.ಬಿ.)]
ಪೌರಾಡಳಿತ, ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ
ಉದ್ಯಮಗಳ ಸಚಿವರು.

ಅನುಬಂಧ-1

ಪ್ರಶ್ನೆ ಸಂಖ್ಯೆ-223 (255)ಕ್ಕೆ ಅನುಬಂಧ								
ಕ್ರ. ಸಂ	ಅನುದಾನದ ವಿವರ	ಖರೀದಿಸಿರುವ ವರ್ಷ	ಯಂತ್ರದ ಹೆಸರು	ಟೆಂಡರ್ ಕರೆದಿರುವ ದಿನಾಂಕ	ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದಿರುವ ಏಜೆನ್ಸಿಗಳ ಹೆಸರು	ಕಾರ್ಯಾದೇಶ ನೀಡಿರುವ ದಿನಾಂಕ	ಅಂತಿಮ ಗೊಂಡ ಏಜನ್ಸಿಯ ಹೆಸರು	ಖರೀದಿಸಿದ ಮೊತ್ತ
1	13ನೇ ಹಣಕಾಸು ಯೋಜನೆ (ಜಿಬಿಜಿ)	2017-18	1 Ton ಪ್ಲಾಸ್ಟಿಕ್ ಬೇಲಿಂಗ್ ಯಂತ್ರ	10/02/2017	ರೇ ಇಂಜಿನಿಯ - ರಿಂಗ್ ವರ್ಕ್ಸ್ ಬೆಳಗಾವಿ ಸಾಧನ ಎನ್ವಿರೋ ಇಂಜಿನಿಯರ್	14/07/2017	ರೇ ಇಂಜಿನಿ-ಯರಿಂಗ್ ವರ್ಕ್ಸ್ ಬೆಳಗಾವಿ	4.25 ಲಕ್ಷ
2	13ನೇ ಹಣಕಾಸು ಯೋಜನೆ (ಜಿಬಿಜಿ) 2014-15	2017-18	50 Metric Ton ವೇಯಿಂಗ್ ಬ್ರಿಡ್ಜ್	08/01/2018	ಮೇಟ್‌ವೇ ಇಂಡಿಯಾ ರೇ ಇಂಜಿನಿಯರಿಂಗ್ ವರ್ಕ್ಸ್ ಬೆಳಗಾವಿ	22/02/2018	ಮೆಟ್‌ವೇ ಇಂಡಿಯಾ	13.65 ಲಕ್ಷ
3	2015-16 ನೇ ಸಾಲಿನ ಎಸ್.ಎಫ್.ಸಿ (ಮುಕ್ತನಿಧಿ)	2016-17	40 TPD ಸ್ಕ್ರೀನಿಂಗ್ ಯಂತ್ರ ಜೊತೆಗೆ ಕನ್ವೇಯರ್ ಬೆಲ್ಟ್	Direct entrustment work order date: 10-11-2016			ನಿರ್ಮಿತಿ ಕೇಂದ್ರ ಬೀದರ್	40.00 ಲಕ್ಷ
4	ಎಸ್.ಎಫ್.ಸಿ (ಮುಕ್ತನಿಧಿ) 2013-14	2013-14	ಸೆಗ್ರಿಗೇಷನ್ ಯಂತ್ರ	Direct entrustment work order date: 22/03/2014			ನಿರ್ಮಿತಿ ಕೇಂದ್ರ ಬೀದರ್	10.00 ಲಕ್ಷ